ಎರಡು ನೂರು ಕೋಟಿ ರೂಪಾಯಿಗಳ ಪರಿಹಾರವನ್ನು ಕೇಳಿದ್ದಕ್ಕೆ ಕೇಂದ್ರ ಸರ್ಕಾರ ಎಷ್ಟು ಪರಿಹಾರವನ್ನು ಕೊಟ್ಟಿದೆ? ರಾಜ್ಯಸರ್ಕಾರ ಎಷ್ಟು ಕೊಟ್ಟಿದೆ? ತಾವು ಒಪ್ಪಿಕೊಂಡಿರುವ ಪ್ರಕಾರ ೨,೨೧,೦೦೦ ಹೆಕ್ಟೇರ್ ಜಮೀನು ಬೆಳೆ ಸಂಪೂರ್ಣ ನಾಶವಾಗಿದೆ ಮತ್ತೆ ತಾವೇ ಒಪ್ಪಿಕೊಂಡಿರುವ ಪ್ರಕ್ಕಾರ ೫೬ ಸಾವಿರ ಮನೆಗಳು ನೆಲಸಮವಾಗಿವೆ. ಈ ಒಂದು ಸಂದರ್ಭದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಂಡರೂ ಚಿಂತೆ ಇಲ್ಲ ಸ್ವಾಮಿ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ನಿಮ್ಮ ನಾಲ್ಕು ಜನರದ್ದೇ ಸಂತೆಯಾಗಿ ಹೋಗಿಬಿಟ್ಟರೆ ಇಲ್ಲಿ ಕುಳಿತುಕೊಂಡು ನಾವೆಲ್ಲಾ ಏನು ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರತಿ ಸಾರಿ ನಿಂತು ಕೊಂಡು ಗಂಟಲು ಕಿರುಚಿಕೊಳ್ಳುವುದಕ್ಕೆ ನಮ್ಮಕ್ಕೆಯಲ್ಲಿ ಶಕ್ತಿ ಇಲ್ಲ. ನಾನು ನಿಲುವಳಿ ಸೂಚನೆಯನ್ನು ಚರ್ಚೆಗಾಗಿ ಕಳುಹಿಸಿದ್ದೇನೆ. ದಯಮಾಡಿ ಅದನ್ನು ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :- ತಾವು ದಯವಿಟ್ಟು ಅವಕಾಶವನ್ನು ಕೊಡಿ. ಆಮೇಲೆ ಏನಾದರೂ ಮಾಡೋಣ.

(೨) ರೇಷ್ಮೆ ಬೆಲೆಯಲ್ಲಿಕುಸಿತ,

ಶ್ರೀ ವಾಟಾಳ್ ನಾಗರಾಜ್:- ಕೋಟ್ಯಾಂತರ ರೇಷ್ಮೆ ಬೆಳೆಗಾರರ ಜೀವನಮರಣದ ಪ್ರಶ್ನೆ. ಇದನ್ನು ನೀವು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಲೇ ಬೇಕು. ಇಡೀ ರಾಜ್ಯದಲ್ಲಿ ಕೋಟ್ಯಾಂತರ ರೇಷ್ಮೆ ಬೆಳೆಯುವ ಜನರು ಇವತ್ತು ನಾಶವಾಗುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತಿನ ದಿವಸ ನೆರೆ ಹಾವಳಿಯ ಬಗ್ಗೆ ರೈತರು ಸಂಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಸುಮಾರು ೧೦ ಜಿಲ್ಲೆ. ೭೮ ತಾಲ್ಲೂಕಿನಲ್ಲಿ ನಮಗೆ ಗೊತ್ತಿರುವ ಹಾಗೆ ಎರಡು ಲಕ್ಷದ ಐವತ್ತು ಸಾವಿರ ಹೆಕ್ಟೇರ್ ಜಮೀನಿನ ಬೆಳೆ ನಾಶವಾಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ತಾವು ಹೇಳಿದ ಪ್ರಕಾರ ಪರಿಹಾರವನ್ನು ಕೊಟ್ಟಿದ್ದೀರಾ? ಕೇಂದ್ರ ಸರ್ಕಾರ ದುಡ್ಡು ಕೊಟ್ಟಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟರೆ, ಅದರ ಬಗ್ಗೆ ಚರ್ಚೆ ಯಾವರೀತಿ ಆಗಬೇಕೆಂದು ತಾವು ತೀರ್ಮಾನ ಮಾಡಿದರೆ ತಮ್ಮ ತೀರ್ಪಿಗೆ ನಾವು ಮನ್ನಣೆಯನ್ನು ಕೊಡುವುದಕ್ಕೆ ಸಿದ್ಧ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಸಂಸದೀಯ ಸಚಿವರು ತಾವು ಕಾನೂನು ವಿಧಿ ವಿಧಾನಗಳ ಬಗ್ಗೆ ಹೇಳುವುದರ ಬದಲು, ನೆರೆಹಾವಳಿಯ ಬಗ್ಗೆ ಸರ್ಕಾರದ ನಿರ್ಧಾರ ಏನು ಅದರ ಬಗ್ಗೆ ತಾವು ಒಂದು ಹೇಳಿಕೆಯನ್ನು ಕೊಡಿ. ನಿಮ್ಮ ನಿಲುವು ಏನಾಗಿದೆ ನೀವು ನೆರೆಹಾವಳಿಯ ಬಗ್ಗೆ ಏನೇನು ಮಾಡಿದ್ದೀರಿ, ಅವರಿಗೆ ಏನು ಪರಿಹಾರವನ್ನು ಕೊಟ್ಟಿದ್ದೀರಿ. ಕೇಂದ್ರದಿಂದ ಎಷ್ಟು ಹಣ ಬಂತು, ಅವರ ಬಗ್ಗೆ ನೀವು ಏನು ಚಿಂತನೆ ಮಾಡಿದ್ದೀರಿ, ಅದನ್ನು ಹೇಳಬೇಕು. ಸರ್ಕಾರ ಅದನ್ನು ಬಿಟ್ಟು ನೀವು ಕೈಯಲ್ಲಿ ವಿಧಿಯನ್ನು ಇಟ್ಟುಕೊಂಡು ಈ ವಿಧಿಯ ಪ್ರಕಾರ ಎತ್ತಬಹುದೇ ಎನ್ನುವಂತಹ ಪ್ರಶ್ನೆ ಮಾಡಬೇಡಿ ಅದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಪ್ರವಾಹದಿಂದ ತೊಂದರೆಯಾಗಿರುವ ಬಗ್ಗೆ ಈ ವಿಷಯ ಕಳೆದ ಸಾರಿ ಶಾಸನಸಭೆ ಸೇರಿದಾಗ ದೀರ್ಘವಾದಂತಹ ಚರ್ಚೆಯಾಗಿ ಸರ್ಕಾರ ದೀರ್ಘವಾಗಿ ಉತ್ತರವನ್ನು ಕೊಟ್ಟಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಅಮೇಲೆ ಏನಾಯಿತು. ಹಿಂದೆ ಬೇಡ ಸ್ವಾಮಿ, ಮುಂದಕ್ಕೆ ಏನಾಯಿತು ಅದನ್ನು ಹೇಳಿ. ನೆರೆಹಾವಳಿಯಿಂದ ಏನಾಗಿದೆ ನಾವು ಏನು ಮಾಡಿದ್ದೇವೆ ಸರ್ಕಾರ ಏನು ಮಾಡಿದೆ ಅದನ್ನು ಹೇಳಿ. ಹಿಂದಿನ ಕಥೆಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅದನ್ನೆಲ್ಲಾ ಹೇಳುತ್ತೇವೆ. ಜನರಲ್ ಬಜೆಟ್ ಇದೆ. ರಾಜ್ಯಪಾಲರ ಭಾಷಣದಲ್ಲಿ ತಾವು ಏನು ಬೇಕಾದರೂ ಹೇಳಿ. ಅದಕ್ಕೆ ಉತ್ತರ ನಾವು ಕೊಡುತ್ತೇವೆ. ಆದರೆ ನಾನು ಹೇಳುವುದು ಈ ನಿಯಮ ಎಲ್ಲಿಯವರೆಗೂ ಇದೆಯೋ ಆ ನಿಯಮವನ್ನು ಈ ಸಭೆ ಅನುಸರಿಸಬೇಕು. ಅನುಸರಿಸುವಂತೆ ಅಧ್ಯಕ್ಷರು ಮಾನ್ಯ ಸದಸ್ಯರಿಗೆ ಹೇಳಬೇಕು. ಇದು ತುರ್ತಾಗಿ ನಡೆದಿರತಕ್ಕಂಥ ವಿಷಯ ಅಲ್ಲ. ತುರ್ತಾಗಿ ಅಲ್ಲದೇ ಹೋದರೆ ಈ ನಿಯಮ ಪ್ರಕಾರ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಬ್ಬ ಜವಾಬ್ದಾರಿ ಸ್ಥಾನದಲ್ಲಿ ಇದ್ದುಕೊಂಡು ಸಚಿವರು.....

ಶ್ರೀ ವಾಟಾಳ್ ನಾಗರಾಜ್:- ನಾವು ಅಧ್ಯಕ್ಷರ ಕೊಠಡಿಗೆ ಬಂದು ಈ ಪ್ರಶ್ನೆಯನ್ನು ಕೇಳುತ್ತೇನೆಂದು ಹೇಳಿದ್ದೇವೆ. ನಾವು ಈ ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿಲ್ಲ. ತಮ್ಮನ್ನು ಕೇಳಿದ್ದೇವೆ. ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಬರುತ್ತಾ ಬರುತ್ತಾ ಕಠಿಣ ಪ್ರಸಂಗಕ್ಕೆ ಹೋಗುತ್ತಿದ್ದೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅನುಮತಿಯನ್ನು ಕೊಡಬಾರದೆಂದು ಹೇಳುತ್ತಿಲ್ಲ. ಇದು ತುರ್ತಾದ ವಿಷಯ ಅಲ್ಲ. ಹಿಂದೆ ಇದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಿ ವಿಮರ್ಶೆ ನಡೆದಿದೆ. ಈ ಸಭೆಯಲ್ಲಿ ಬೇರೆ ಕಲಾಪಗಳನ್ನು ಮುಂದಕ್ಕೆ ಹಾಕಿ ಚರ್ಚೆ ಮಾಡುತಕ್ಕಂಥ ವಿಷಯ ಅಲ್ಲ. ಈ ರೀತಿ ಹೋದರೆ ಸಭೆಯ ನಿಯಾಮಾವಳಿಗಳನ್ನು ನಾವು ತಿರಸ್ಕಾರ ಮಾಡಿದಹಾಗೆ ಆಗುತ್ತದೆ. ನಿಯಮಗಳ ಪ್ರಕಾರ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇದನ್ನು ವಜಾ ಮಾಡಬೇಕೆಂದು ನಾನು ಕೇಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರು ನಾನೇನು ಕೊಟ್ಟಿದ್ದೇನೆಂದರೆ ನೆರೆ ಹಾವಳಿಯಿಂದ ಸಿಕ್ಕಂಥ ರೈತನಿಗೆ ತಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಮೇಲೆ ೨೦೦ ಕೋಟಿ ರೂಪಾಯಿಯನ್ನು ಪರಿಹಾರ ಕೇಳಿದ್ದೀರಿ. ಕೇಂದ್ರ ಸರ್ಕಾರ ಕೊಟ್ಟಿದೆಯೇ? ಅವರನ್ನು ಮನವನ್ನುಪೊಲಿಸಿದ್ದೀರಾ? ಈಗ ನಾವು ಹೇಳಿದಮೇಲೆ ಏನು ಪರಿಹಾರವನ್ನು ಒದಗಿಸಿಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ಹಳೆಯ ವಿಷಯವನ್ನು ನಾವು ಪ್ರಸ್ತಾಪ ಮಾಡುತ್ತಿಲ್ಲ. ಜನವರಿಯಲ್ಲಿ ಚರ್ಚೆಯಾದಮೇಲೆ ಪುನಃ ನಾವು ಫೆಬ್ರವರಿ ೧೭ ರಂದು ಇವತ್ತು ಕುಳಿತಿರಬೇಕಾದರೆ ಕೇಂದ್ರಸರ್ಕಾರಕ್ಕೆ ಈ ಬಗ್ಗೆ ನೀವು ಮನವೊಲಿಸಿದ್ದಿರಾ? ೨೦೦ ಕೋಟಿ ರೂಪಾಯಿಯನ್ನು ಕೇಳಿದರೆ ಸತ್ತಿರುವಂತಹ ರೈತನಿಗೆ ಸಿಕುತ್ತಿತ್ತು. ಅದಕ್ಕೋಸ್ಕರ ಇವತ್ತು ಈ ಕಳೆದ ಎರಡುತಿಂಗಳಲ್ಲಿ ಪರಿಹಾರವನ್ನು ಹಂಚುವುದಕ್ಕೋಸ್ಕರ ರೈತನಿಗೆ ನೆರವು ಕೋಡುವುದಕ್ಕೋಸ್ಕರ ನಿಮ್ಮ ಸರ್ಕಾರ, ಕೇಂದ್ರ ಸರ್ಕಾರ, ಏನೇನು ಕ್ರಮ ಕೈಗೊಂಡಿದೆ. ಸರ್ಕಾರಕ್ಕೆ ಜವಾಬ್ದಾರಿ ಇದ್ದಿದ್ದರೆ ನೀವು ಬಂದ ತಕ್ಷಣ ಒಂದು ಸ್ಟೇಟ್‌ಮೆಂಟ್‌ಅನ್ನು ಮಾಡಬೇಕಾಗಿತ್ತು. ಇದು ಪ್ರಮುಖವಾದಂತಹ ವಿಷಯವಾಗಿದೆ. ಕೆ.ಎಸ್.ಆರ್.ಟಿ.ಸಿ.ದು ಎಲ್ಲರಿಗೂ ಸಂಬಂದವಿದ್ದುದ್ದರಿಂದ ಆದರ ಬಗ್ಗೆ ಚರ್ಚೆಯಾಯಿತು. ಈಗ ನೆರೆಹಾವಳಿಯ ವಿಷಯ ಬಗ್ಗೆ ದೀರ್ಘವಾದಂತಹ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಸರ್ಕಾರ ಇದಕ್ಕೆ ಸರಿಯಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜು:- ಇದುವರೆಗೂ ಪರಿಹಾರವನ್ನು ಕೊಟ್ಟಿಲ್ಲ. ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಜನಗಳು ಬೀದಿಯಲ್ಲಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನೆಂದು ಹೇಳಿದರೆ ನೀವು ಎಧಿ ವಿಧಾನವನ್ನು ತೆಗೆದುಕೊಂಡರೆ ಹೇಗೆ? ಇದು ಏನು ಪ್ರಶ್ನೆ. ನೀವು ಹಿರಿಯ ಸಚವರು. ಈ ರೀತಿ ನೀವು ಹೇಳಿದರೆ ನಿಮಗೆ ಒಪ್ಪಿಗೆಯಾಗುತ್ತದೆಯೇ? ಒಪ್ಪಿಗೆಯಾದರೆ ದಯಮಾಡಿ ಹೇಳಿ. ಜನ ಕಂಗಾಲಾಗಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಬಿದ್ದಿರತಕ್ಕ ಮನೆಯನ್ನು ಇವರು ಕಟ್ಟುವುದಕ್ಕೆ ಆಗಿಲ್ಲ. ದನಕರುಗಳು ನಾಶವಾಗಿದೆ. ಪಂಪುಸೆಟ್ಟುಗಳು ಕೆಟ್ಟಿದೆ. ಕೋಟ್ಯಾಂತರ ರೂಪಾಯಿಯ ಬೆಳೆ ನಾಶವಾಗಿದೆ. ಇದರ ಬಗ್ಗೆ ಅವರು ಏನೂ ಮಾತನಾಡಿಲ್ಲ. ಬರೀ ಮಾತನಾಡಿದರೆ ಹೇಗೆ?

ಶ್ರೀ ಬಿ.ಹೆಚ್. ಬನ್ನಿಕೋಡ್:- ಇದು ಅತ್ಯಂತ ತುರ್ತಾದಂದಹ ಪ್ರಶ್ನೆ. ರೈತರ ಅಳಿವು ಇರುವಂತಹ ಪ್ರಶ್ನೆ. ಬೇಸಿಗೆ ಕಾಲ ಬರುತ್ತಿದೆ ಅದಕ್ಕೆ ಪ್ರಮುಖವಾದಂತಹ ಈ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು. ಸರ್ಕಾರ ಇದುವರೆಗೂ ಯಾವುದೇ ಪರಿಹಾರವನ್ನು ಕೊಟ್ಟಿಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ:- ಸರ್ಕಾರದ ಜೊತೆಯಲ್ಲಿ ನಾವು ಸಹಕರಿಸಿದ್ದೇವೆ, ಇದರ ಬಗ್ಗೆ ಸಾಕಷ್ಟು ಬಾರಿ ಚರ್ಚೆಯಾಗಿದೆ. ಕೇಂದ್ರ ಸರ್ಕಾರಕ್ಕೆ ನೆರವನ್ನು ಕೋರಿದ್ದೇವೆಂದು ಹೇಳಿದಿರಿ, ಕೇಂದ್ರ ಸರ್ಕಾರದಿಂದ ಎಷ್ಟು ನೆರವು ಬಂದಿತು? ಅಥವಾ ಬಂದಿಲ್ಲ ಎನ್ನತಕ್ಕಂಥಾದನ್ನು ತಿಳಿದುಕೊಳ್ಳಬೇಕಲ್ಲವೆ? ಕಾರಣವೇನೆಂದರೆ, ಇವೊತ್ತು ಯಾವ ಜನರು ತೊಂದರೆಗೆ ಸಿಲುಕಿದ್ದಾರೋ ಅವರಿಗೆ ಸರ್ಕಾರದ ಪರಿಹಾರ ಮುಟ್ಟಿಲ್ಲ. ಇನ್ನು ಬೇಸಿಗೆ ಬಂದರಂತೂ ಪರಿಸ್ಥಿತಿ ಭೀಕರವಾಗುತ್ತದೆ. ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಲಿ. ಅಲ್ಲಿಂದ ಇಲ್ಲಿಯವರೆಗೆ ವಸ್ತು ಸ್ಥಿತಿ ಏನಾಗಿದೆ? ಎಂಬುದರ ಬಗ್ಗೆಯಾದರೂ ಸರ್ಕಾರ ಹೇಳಿಕೆ ಕೊಡಬೇಕಲ್ಲವೆ?

(ಗೊಂದಲ)

ಶ್ರೀ ಆರ್.ಎ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಈಗ ತಾನೆ ಮಾನ್ಯ ಸಚವರು ಇದರ ವಿಷಯವಾಗಿ ಚರ್ಚೆಯಾಗಿದೆಯೆಂದು ಹೇಳಿದ್ದಾರೆ. ನಿಜ, ಚರ್ಚೆ ಆಗಿದೆ. ಏನು ಚರ್ಚೆಯಾಯಿತು? ಏನು ಅನಾಹುತಗಳಾದವು ಮತ್ತು ಏನು ಕಷ್ಟ-ನಷ್ಟಗಳುಂಟಾದವೆಂಬುದರ ಬಗ್ಗೆ ನಾವು ಸರ್ಕಾರದ ಗಮನಕ್ಕೆ ತಂದೆವು. ಆ ರೀತಿ ಸರ್ಕಾರದ ಗಮನಕ್ಕೆ ತಂದಂಥ ಸಂದರ್ಭದಲ್ಲಿ ತಾವು ಏನು ಹೇಳಿದಿರಿ, ''ನಾವು ಕೇಂದ್ರ ಸರ್ಕಾರದಿಂದ ನೆರವು ತರುತ್ತೇವೆ, ಮನೆಗಳನ್ನು ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ, ರೈತರಿಗೆ ಬೀಜ, ಗೊಬ್ಬರವನ್ನು ಕೊಟ್ಟು, ಬೆಳೆ ಪರಿಹಾರವನ್ನು ಕೊಡುತ್ತೇವೆ '' ಎಂದು ಹೇಳಿದಿರಿ. ಇದುವರೆವಿಗೂ ನೀವು ಈ ರಾಜ್ಯದ ಒಬ್ಬ ರೈತನಿಗೂ ಸಹ ಬೆಳೆ ಪರಿಹಾರವನ್ನು ಕೊಡುವುದಕ್ಕಾಗಿಲ್ಲ, ಒಂದು ಮನೆಯನ್ನು ಸಹ ಕಟ್ಟಿಕೊಡುವುದಕ್ಕಾಗಿಲ್ಲ. ಹಾಗಾಗಿ ಇವೊತ್ತು ಒಂದು ಗಂಭೀರ ಸಮಸ್ಯೆ ಇದೆ. ಆದರೆ, ತಾವು ಇದರ ಬಗ್ಗೆ ರೂಲ್ ಕೋಟ್ ಮಾಡಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದು ಬಹಳ ಮಹತ್ವವಾದ ವಿಷಯ. ರಾಜ್ಯದ ರೈತ ಬಹಳ ಕಷ್ಟದಲ್ಲಿದ್ದಾನೆ, ಒಂದು ಕಡೆ ಬರಗಾಲವಿದ್ದರೆ ಮತ್ತೊಂದು ಕಡೆ ಬೆಳೆದಂಥ ಬೆಳೆ ನಾಶವಾಗಿದೆ. ಅದರಿಂದಾಗಿ ಇವೊತ್ತು ಭತ್ತಕ್ಕೆ ಬೆಲೆ ಇಲ್ಲ, ಹತ್ತಿ ಬೆಲೆಯಂತೂ ೭೦೦-೮೦೦ ರೂಪಾಯಿಗಳಿಗೆ ಬಂದಿದೆ, ಜೋಳದ ಬೆಲೆ ೧೪೦ ರೂಪಾಯಿಯಾಗಿದೆ. ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಂತಿಲ್ಲ. ನೆರೆ ಹಾವಳಿ ಬಂದು ರೈತರು ಬಹಳ ಕಷ್ಟದಲ್ಲಿದ್ದು, ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಕೊಳ್ಳದೆ, ನೀವು ಯಾವುದೋ ಒಂದು ಸೆಕ್ಷನ್ ಹೇಳಿ ಚರ್ಚೆಗೆ ಅಡ್ಡಿ ಬರಬಾರದು, ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಆದರೆ, ಯಾವ ರೀತಿಯಲ್ಲಿ ಚರ್ಚೆಯಾಗಬೇಕೆಂಬುದರ ಬಗ್ಗೆ ಸಭಾಧ್ಯಕ್ಷರು ತೀರ್ಮಾನಿಸಲಿ. ಚರ್ಚೆಗೆ ತಾವು ಅವಕಾಶ

ಮಾಡಿಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕು. ಈ ಹಿಂದೆ ತಾವು ೫೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದು, ಆ ಹಣ ಇದುವರೆವಿಗೂ ಯಾವ ರೈತರಿಗೂ ಕೂಡ ಮುಟ್ಟಿಲ್ಲ. ತಮ್ಮ ಮನೆಗಳನ್ನು ಕಳೆದುಕೊಂಡವರಿಗೂ ಸಹ ಮುಟ್ಟಿಲ್ಲ. ಅಷ್ಟೇ ಅಲ್ಲ ವಿಶ್ವ ಬ್ಯಾಂಕಿನಿಂದ ನೆರವು ತರುತ್ತೇವೆಂದು ಹೇಳಿದಿರಿ, ಒಂದು ಪೈಸೆಯೂ ತೆಗೆದುಕೊಂಡು ಬಂದಿಲ್ಲ. ಅದಕ್ಕೂ ನೀವು ಪ್ರಸ್ತಾಪ ಮಾಡಿಲ್ಲ. ಹೀಗಾಗಿ ಇದು ಇವೊತ್ತು ಗಂಭೀರ ಸ್ವರೂಪ ತಾಳಿದೆ. ಏಕೆಂದರೆ, ರಾಜ್ಯದ ವಿಚಾರದಲ್ಲಿ ಹಿಂದೆಂದೂ ಇಂತಹ ನೆರೆ ಹಾವಳಿ ಬಂದಿರಲಿಲ್ಲ. ಇಷ್ಟೊಂದು ಕಷ್ಟ ಬಡ ಜನತೆಗೆ ಬಂದಿರಲಿಲ್ಲ. ಸರ್ಕಾರ ಯಾವುದೇ ರೂಲ್ಸ್‌ಅನ್ನು ಮಧ್ಯದಲ್ಲಿ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಎಷ್ಟು ಹಣ ಬಿಡುಗಡೆ ಮಾಡಿದಿರಿ? ಇದುವರೆವಿಗೆ ರೈತರಿಗೆ ಏನು ಸಹಾಯ ಮಾಡಿದಿರಿ? ಬಡ ಜನರಿಗೆ ಏನು ಸಹಾಯ ಮಾಡಿದಿರಿ? ಎಷ್ಟು ಮನೆಗಳನ್ನು ಕಟ್ಟಿಕೊಟ್ಟಿದ್ದೀರಿ? ವಿಶ್ವ ಬ್ಯಾಂಕಿಗೆ ಇದರ ವಿಷಯವಾಗಿ ಪ್ರಸ್ತಾಪ ಮಾಡಿದ್ದೀರಾ? ಕೇಂದ್ರ ಸರ್ಕಾರದಿಂದ ಎಷ್ಟು ನೆರವು ಬಂದಿದೆ? ಎಂಬುದು ಸದನಕ್ಕೆ ಗೊತ್ತಾಗಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಅವೊತ್ತಿನ ದಿವಸ ಗಡಹಿಂಗ್ಲಜಾಕ್ಕೆ ಮಾನ್ಯ ಕಂದಾಯ ಸಚಿವರಾದ ರಾಜಶೇಖರ ಮಾರ್ತಿಯವರು ಬಂದಿದ್ದಾಗ 'ನಿಮ್ಮ ಜಿಲ್ಲೆಗೆ ಎರಡೂವರೆ ಕೋಟಿ ರೂಪಾಯಿಗಳನ್ನು ಕಳುಹಿಸಿಕೊಡುತ್ತೇನೆ'. ಎಂದು ಹೇಳಿದರು. ಈ ತನಕ ಆ ಹಣ ಬಂದಿಲ್ಲ. ಹಣವನ್ನು ಸಮರೋಪಾದಿಯಲ್ಲಿ ಕಳುಹಿಸಿಕೊಡುತ್ತೇನೆಂದು ಹೇಳಿದರು. ರೈತರ ಕುರಿಗಳೆಲ್ಲವೊ ಸತ್ತಿವೆ ಅದಕ್ಕೆ ಹಣವಿಲ್ಲ. ಕಾಂಗ್ರೆಸ್ ಕುರಿಗಳು ಸತ್ತಾಗ ಮಾತ್ರ ದುಡ್ಡು ಕೊಟ್ಟರು. ಎಲ್ಲಿ ಈ ಕಾಂಗ್ರೆಸ್ ಕುರಿಗಳು ಸಾಯುತ್ತವೆ, ಅವುಗಳಿಗೆ ಹಣ ಕೊಡುತ್ತಾರೆ, ಉಳಿದ ಜನತಾ ಕುರಿಗಳು ಸತ್ತರೆ ಹಣ ಕೊಡುವುದಿಲ್ಲ. ಅಲ್ಲದೆ, ರಸ್ತೆಗಳೆಲ್ಲಾ ಹಾಳಾಗಿ, ಮನೆಗಳೆಲ್ಲಾ ಬಿದ್ದುಹೋಗಿದ್ದು, ಅವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ಸಿಗದೆ ಅನ್ಯಾಯವಾಗುತ್ತಿದೆ. ಆದುದರಿಂದ, ಮಾನ್ಯ ಕಂದಾಯ ಸಚಿವರನ್ನು ಸದನಕ್ಕೆ ಕರೆಯಿಸಿ ಇದರ ಬಗ್ಗೆ ಒಂದು ಹೇಳಿಕೆ ಕೊಡಿಸಬೇಕು. ಅವರು ಹಿಂದೆ ಯಾವ ವಚನವನ್ನು ಕೊಟ್ಟಿದ್ದರು, ಆ ವಚನದ ಪ್ರಕಾರ ನಡೆದುಕೊಂಡಿದ್ದಾರೆಯೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವರು):- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಎಷಯವನ್ನು ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಎತ್ತಿದ್ದಾರೆ. ವಿಷಯ ಬಹಳ ಮಹತ್ವವಾದುದು. ಈ ಸದನದಲ್ಲಿ ಇಡೀ ರಾಜ್ಯದ ಜನತೆಯ ಸಮಸ್ಯೆಗಳನ್ನು ಪರಿಶೀಲನೆ ಮಾಡಬೇಕಾದಂಥ ವಿಷಯ, ಇದು ಚರ್ಚೆಯಾಗಬೇಕು. ಅದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ. ಅಲ್ಲದೆ, ಕೇಂದ್ರ ಸರ್ಕಾರದಿಂದ ಏನು ನೆರವು ಬಂದಿದೆ? ವಿಶ್ವ ಬ್ಯಾಂಕಿನಿಂದ ಏನು ನೆರವು ಸಿಕ್ಕಿದೆ? ಈ ಪ್ರಶ್ನೆಗಳಿಗೆ ಸರ್ಕಾರ ಸದನದಲ್ಲಿ ಉತ್ತರ ಕೊಡಬೇಕಾಗುತ್ತದೆ. ಶ್ರೀಮಾನ್ ದೇಶಪಾಂಡೆಯವರು ಒಂದು ಮಾತನ್ನು ಹೇಳಿದರು. ಏನೆಂದರೆ, ಈ ನಿಯಮದಲ್ಲಿ ಇಲ್ಲದ್ದಿದರೆ ಬೇರೆ ನಿಯಮದಲ್ಲಿ ಸೇರಿಸಿ ಮಾಡಬಹುದೆಂದು ಹೇಳಿದರು. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಆದರೆ, ನಾನು ಹೇಳುವುದೇನೆಂದರೆ, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಂಡು ದಿನವೆಲ್ಲಾ ಚರ್ಚೆ ಮಾಡುವ ಬದಲು ಗಮನ ಸೆಳೆಯುವ ರೂಪದಲ್ಲಿ ಅಥವಾ ಬೇರೆ ಯಾವುದೇ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು. ಇದಕ್ಕೆ ಸರ್ಕಾರ ಉತ್ತರ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ಚರ್ಚೆಯಾಗಿದೆ. ಸರ್ಕಾರದ ನಿರ್ಧಾರ ಏನೆಂಬುದರ ಬಗ್ಗೆ ಹೇಳಿಕೆ ಕೊಡಿ. ಯಾವಾಗ ಹೇಳಿಕೆ ಕೊಡುತ್ತೀರಿ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಅದರ ಬಗ್ಗೆ ಚರ್ಚೆ ಅನಾವಶ್ಯಕ, ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಹೇಳಿದರೆ ಸಾಕು, ಅದರ ಬಗ್ಗೆ ಒಂದು ಹೇಳಿಕೆಯನ್ನು ಮಾಡಲಿ, ಅಷ್ಟೇ ಸಾಕು, ಚರ್ಚೆ ಮಾಡುವುದರಿಂದ ಕಾಲವು ವ್ಯಯವಾಗುತ್ತದೆ, ಚರ್ಚೆಯಿಂದ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಚರ್ಚೆಯ ಅಗತ್ಯವಿಲ್ಲ, ಅದರ ಬಗ್ಗೆ ಸರ್ಕಾರದ ಕ್ರಮವೇನು? ಸರ್ಕಾರ ಕೈಗೊಂಡ ಕ್ರಮವೇನು? ಮತ್ತೆ ಚರ್ಚೆಗೆ ಹೋಗಬೇಕಾಗಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಹಣವಿಲ್ಲದೆ ನೆರೆಹಾವಳಿಯಿಂದ ಹಾನಿಗೊಳಗಾದವರಿಗೆ ಪರಿಹಾರವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀವಾಟಾಳ್ ನಾಗರಾಜ್:- ಹೇಳಿಕೆ ಯಾವಾಗಕೊಡುತ್ತೀರಿ?

(ಗೊಂದಲ)

ಅಧ್ಯಕ್ಷರು:- ಈಗ ತಮ್ಮ ಹೇಳಿಕೆಯ ಮೇರೆಗೆ ಸರ್ಕಾರದವರು ಸ್ಟೇಟ್‌ಮೆಂಟ್ ಕೊಡಬೇಕಾಗಿದೆ, ಅವರು ಅದನ್ನು ಕೊಡುತ್ತೇನೆಂದು ಹೇಳಿದರು, ಮಾನ್ಯ ಸಚಿವರು ಯಾವಾಗ ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂಬ ಬಗ್ಗೆ ಹೇಳುತ್ತಾರೆ, ಅದನ್ನು ಶಾಂತ ರೀತಿಯಿಂದ ಆಲಿಸಬೇಕು. ಈಗ ರೇಷ್ಮೆ ಗೂಡಿನ ಬಗ್ಗೆ ಚರ್ಚೆ ಪ್ರಾರಂಭಿಸಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಕೂಡಲೆ ಸ್ಟೇಟ್‌ಮೆಂಟ್ ಮಾಡಬೇಕು.

ಅಧ್ಯಕ್ಷರು:- ಹೇಳುತ್ತಾರೆ.

ಶ್ರೀ ಹಾರ್ನಹಳ್ಳಿರಾಮಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರಿಗೆ ಹೇಳಿ ಕಳಿಸಿದ್ದೇನೆ, ಅವರು ಯಾವ ಹೊತ್ತಿಗೆ ಅಂಕಅಂಶಗಳನ್ನು ತಯಾರು ಮಾಡುತ್ತಾರೋ ಯಾವಾಗ ಮಾಡಲು ಸಾಧ್ಯವಾಗುತ್ತದೆಯೋ ಅಂದರೆ ಇವತೋ ಅಥವಾ ನಾಳೆಯೋ, ನಾಡಿದ್ದೋ ಸ್ಟೇಟ್‌ಮೆಂಟ್ ಕೊಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ:- ನಿಮ್ಮ ಬಾಯಿಂದ ಇಂಥ ಅಮೃತ ವಾಕ್ಯವು ಮೊದಲೇ ಬಂದಿದ್ದರೆ ಈ ರೀತಿ ಗಲಾಟೆಯೇ ಆಗುತ್ತಿರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಸರ್ಕಾರ ಗಮನಿಸಿದೆ ಎಂದು ತಾವು ಹೇಳಿದ್ದೀರಿ, ಅದಕ್ಕಾಗಿ ಒಪ್ಪಿಕೊಳ್ಳಬೇಕು. ಆದರೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು, ಚರ್ಚೆಗೆ ಅವಕಾಶ ಮಾಡಿಕೊಡುವ ಮುನ್ನ ಬೇಕಾಗಿರತಕ್ಕ ಸಾಕಷ್ಟು ಮಾಹಿತಿ ನಮ್ಮ ಹತ್ತಿರ ಇರಬೇಕು, ಮಾಹಿತಿ ಇಲ್ಲದೆ ಚರ್ಚೆ ಮಾಡುವುದರಲ್ಲಿ ಏನೂ ಅರ್ಥ ಇದ್ದಂತೆ ಕಾಣುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಆವಾಗ ಇರಲಿಲ್ಲ, ಸ್ಟೇಟ್‌ಮೆಂಟ್ ಮಾಡಿಬಿಟ್ಟರೆ ನೆರೆಹಾವಳಿಯ ಬಗ್ಗೆ ಏನೇನು ಕೊಟ್ಟಿದ್ದಾರೆ, ಏನು ಪರಿಹಾರ ಕೊಟ್ಟಿದ್ದಾರೆ ಎಂಬ

ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುತ್ತದೆ, ಆದ್ದರಿಂದ ಸ್ಟೇಟ್‌ಮೆಂಟ್ ಆದಮೇಲೆ ಚರ್ಚೆ ಮಾಡುವುದರಿಂದ ಅನುಕೂಲವಾಗುತ್ತದೆ. ಮತ್ತು ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕಾ ಏಕಿ ಇದನ್ನು ವಜ ಮಾಡುವುದರ ಬದಲು ಜೀವಂತವಾಗಿಟ್ಟು ಮಾನ್ಯ ಸಂಸದೀಯ ಮಂತ್ರಿಗಳು ಸಲಹೆ ಮಾಡಿದಂತೆ ಬೇರೆ ಮಾರ್ಗವಾದ, ಬೇರೆ ದಿನ ಚರ್ಚೆಗೆ ಅವಕಾಶ ಮಾಡಿಕೊಡಿ. ಹಾಗೆ ಚರ್ಚೆ ಮಾಡುವಮೊದಲು ಬೇಕಾಗಿರತಕ್ಕ ಮಾಹಿತಿಯನ್ನು ಸರ್ಕಾರದವರು ಒದಗಿಸಿಕೊಡಬೇಕು ಎಂದು ತಾವು ಆದೇಶವನ್ನು ನೀಡಿದರೆ ಒಳ್ಳೆಯದು.

೨. ರೇಷ್ಮೆ ಬೆಲೆಕುಸಿತ ಇತರ ಅವಶ್ಯಕ ಬೆಲೆಗಳ ಹೆಚ್ಚಳ:-

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೆ, ರೇಷ್ಮೆಗೂಡಿನ ಬಗ್ಗೆ ದೀರ್ಘವಾಗಿ ಮಾತನಾಡಬೇಕಾಗಿದೆ. ಅದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬೇಕೆಂದು. ನಾವು ಮನವಿ ಮಾಡಿದ್ದೇವೆ. ನಾನು ಮತ್ತೆ ಶ್ರೀ ರಾಮಯ್ಯನವರು ಅದರ ಬಗ್ಗೆ ಸ್ವಲ್ಪ ದೀರ್ಘವಾಗಿ ಮಾತನಾಡಬೇಕಾಗಿದೆ. ಅದಕ್ಕಿಂತ ಮೊದಲು ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ಅದರಲ್ಲಿಯೂ ವಿಶೇಷವಾಗಿ ಮುಖ್ಯಮಂತ್ರಿಗಳ ಮತ್ತು ಆಹಾರ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ಏನಾಗಿದೆ ಎಂದರೆ ಪ್ರತಿನಿತ್ಯವು ಕೇಂದ್ರ ಸರ್ಕಾರದವರು ಒಂದಲ್ಲಾ ಒಂದು ವಸ್ತುವಿನ ಬೆಲೆಯನ್ನು ಹೆಚ್ಚು ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ರೈಲ್ವೆ ಬೆಲೆಯನ್ನು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಜಾಸ್ತಿ ಮಾಡುತ್ತೇವೆ ಎನ್ನತಕ್ಕ ಸೂಚನೆಯನ್ನು ಈಗಾಗಲೆ ಕೊಟ್ಟಿದ್ದಾರೆ. ಕಳೆದ ತಿಂಗಳು ಅಕ್ಕಿಯ ಬೆಲೆಯನ್ನು ಜಾಸ್ತಿ ಮಾಡಿದರು. ತಮಗೆ ಗೊತ್ತಿರುವ ಹಾಗೆ ಗ್ರೀನ್ ಕಾರ್ಡ್‌ದಾರರಿಗೆ ಕೊಡುತ್ತಿದ್ದ ಅಕ್ಕಿಯ ಬೆಲೆಯು ೨ ರೂ. ಇತ್ತು ಅದು ಈಗ ೫-೬೦ ರೂ. ಆಗಿದೆ. ಇವತ್ತು ತರೆದ ಮಾರುಕಟ್ಟೆಯಲ್ಲಿ ಸಿಗತಕ್ಕಂಥ ಅಕ್ಕಿಗೂ ನ್ಯಾಯ ಬೆಲೆ ಅಗಂಡಿಗಳಲ್ಲಿ, ಡಿಪೋಗಳಲ್ಲಿ ಕೊಡತಕ್ಕ ಅಕ್ಕಿಗೂ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇವತ್ತು ಏಕಾ ಏಕಿ, ರಾತ್ರೋರಾತ್ರಿ ರಾಜ್ಯ ಸರ್ಕಾರದವರು, ಕರ್ನಾಟಕ ರಾಜ್ಯ ಸರ್ಕಾರದವರು ಬಸ್ಸ್‌ಗಳ ಬೆಲೆಗಳನ್ನು ಜಾಸ್ತಿ ಮಾಡುವುದಾಗಿ ಘೋಷಣೆ ಮಾಡಿದರು. ನಿನ್ನೆ ರಾತ್ರಿ ಕೇಂದ್ರ ಸರ್ಕಾರದವರು ಡೆಲ್ಲಿಯಲ್ಲಿ ಒಂದು ಪ್ರಸ್ ಸಮ್ಮೇಳನದಲ್ಲಿ ನಾಳೆ ಬೆಳಿಗ್ಗೆಯಿಂದ ಸಕ್ಕರೆಯ ಬೆಲೆಯನ್ನು ಕೆಜಿಗೆ ೧ ರೂ. ೪೦ ಪೈಸೆ ಜಾಸ್ತಿ ಮಾಡುತ್ತೇವೆಂದು ಘೋಷಣೆಮಾಡಿದ್ದಾರೆ. ಕೇಂದ್ರ ಸರ್ಕಾರದವರಿಗೇನಾದರೂ ಗ್ರಹಚಾರ ಬಂದಿದೆಯೋ ಅವರಿಗೆ ಏನಾದರೂ ಗ್ರಹಣ ಹಿಡಿದಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ಇವತ್ತಿನಿಂದ ಸೊಸೈಟಿಗಳಲ್ಲಿ ಸಕ್ಕರೆಯ ಬೆಲೆ ೮ ರೂ. ೩೦ ಪೈಸೆ, ಅದು ಕೇವಲ ಹೇಳಿಕೊಳ್ಳಲು ಮಾತ್ರ, ಆದರೆ ಅವರು ೯ ರೂಪಾಯಿ ತೆಗೆದುಕೊಳ್ಳುತ್ತಾರೆ. ಕೇಂದ್ರ ಸರ್ಕಾರದವರು ಸಕ್ಕರೆ ಕಾರ್ಖಾನೆಗಳ ಮಾಲೀಕರ ಅನುಕೂಲಕ್ಕಾಗಿ ಈ ರೀತಿ ಮಾಡಿದ್ದಾರೆಂದು ಹೇಳುತ್ತೇನೆ. ಅದರ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಒಂದು ಕ್ವಿಂಟಾಲ್ ಸಕ್ಕರೆಗೆ ೫ ರೂಪಾಯನ್ನು ಜಾಸ್ತಿ ಮಾಡುತ್ತೇವೆಂದು ಮಂತ್ರಿಗಳಾದ ಮಾನ್ಯ ಕಲ್ಪನಾಥರೈರವರು ರೈತರಿಗೆ ಹೇಳಿದ್ದಾರೆ. ಆದರೆ ಇದರ ಹಿಂದೆ ಏನು ಪಿತೂರಿ ಇದೆ ಎಂದರೆ. . .

(ಮುಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಮಗೆ ಜನ ೪೦ ವರ್ಷ ಅಧಿಕಾರವನ್ನು ಕೊಟ್ಟರೂ, ಅಕ್ಕಿ ಸಕ್ಕರೆ ಮತ್ತಿತರ ಆಹಾರಪದಾರ್ಥಗಳ ಬೆಲೆ ಜಾಸ್ತಿ ಮಾಡಿದ್ದೀರಿ, ಜನ ಸಾಯಬೇಕೆಂದು ಮಾಡಿದ್ದೀರಾ? ಅಧಿಕಾರ ಹೋಗುವಂಥ ಕಾಲದಲ್ಲಿ ಜನರನ್ನು ಪೂರ್ತಿ ಮುಗಿಸಬೇಕೆಂದು